164(2)

SATYAVADI Founded 1917 Regd. No. M 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 171] ಮಂಗಳವಾರ 19—3—46 [ಬಿಡಿ ಪ್ರತಿ 3 ಪೈ

ಮೈಸೂರು ಕಾಂಗ್ರೆಸ್ಸಿನಲ್ಲಿ 'ಸಂಚು'

ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ರಾಜಧಾನಿಯಲ್ಲಿ ನಡೆದ ಚುನಾವಣೆಯಲ್ಲಿ ಸಾಹುಕಾರ್ ಶ್ರೀ ಚಿನ್ನಯ್ಯನವರು ಬಹುಮತದಿಂದ ಚುನಾಯಿತರಾಗಿ ಶ್ರೀ ಎಚ್. ಸಿ. ದಾಸಪ್ಪನವರು ಪರಾಜಯ ಹೊಂದಿದರು. ಚುನಾವಣೆಯಲ್ಲಿ ಒಬ್ಬರು ಗೆಲ್ಲುವುದು ಇನ್ನೊಬ್ಬರು ಸೋಲುವುದು ಸ್ವಾಭಾವಿಕ ಮತ್ತು ಆಗಲೇ ಬೇಕಾದದ್ದು. ಈ ಜಯಾಪಜಯಗಳಲ್ಲಿ ಹರ್ಷ ವ್ಯಸನಗಳಿಗೆ ಸ್ಥಾನವಿಲ್ಲ. ಉನ್ನೇದುವಾರರಾದವರು ಈ ವಿಷಯವನ್ನು ತಿಳಿದುಕೊಂಡೇ ಇರುತ್ತಾರೆ. ಪ್ರತಿಸ್ಪರ್ಧಿಯಾಗಿ ಜಯಗಳಿಸದಿದ್ದವರು ಜಯಶಾಲಿಯಾದವರನ್ನು ಅಭಿನಂದಿಸುವುದು ಸಾಂಪ್ರದಾಯಕವಾಗಿದೆ ಆ ಕರ್ತವ್ಯವನ್ನು ಶ್ರೀ ದಾಸಪ್ಪನವರು ನೆರವೇರಿಸಿದ್ದಾರೆ.

ಈ ವಿಷಯವನ್ನು 'ಸಾಧ್ವಿ' ಪತ್ರಿಕೆಯು ಮೊನ್ನೆಯ ದಿನ ಪ್ರಧಾನ ಲೇಖನವನ್ನೇ ಬರೆದು ವಿಮರ್ಶಿಸಿದುದು, ಕಾಂಗ್ರೆಸ್ ಅಭಿಮಾನಿಗಳ ಮನಸ್ಸನ್ನು ಸ್ವಲ್ಪ ನೋಯಿಸುವಂತಾಗಿರುತ್ತದೆಂದು ಹೇಳದೇ ವಿಧಿಯಿಲ್ಲ. ಇವರು ಪರಾಜಿತರು ಜಯಶಾಲಿಗಳನ್ನು ಅಭಿನಂದಿಸುವ ಸಂಪ್ರದಾಯವನ್ನೇ ಎತ್ತಿ ಹಿಡಿದು ಶ್ರೀ ಚಿನ್ನಯ್ಯನವರ ಜಯವನ್ನೇ ಸಮರ್ಥಿಸಿರುವುದು ಗವ ನಾರ್ಹವಾದುದು. ಶ್ರೀ ದಾಸಪ್ಪನವರ ಅಭಿಪ್ರಾಯವು, ಶ್ರೀ ಚಿನ್ನಯ್ಯನವರು ಅರಿಸಿ ಬಂದದ್ದೇ ರವ್ಯೋತ್ಸವವಾಯಿತೆಂದು ಇರುವುದಾದರೆ, ಅವರು ಪ್ರತಿಸ್ಪರ್ಧಿಯಾಗಿ ನಿಂತಿದುದರ ಅರ್ಥವೇನು ? ಅಷ್ಟನ್ನು ತಿಳಿದುಕೊಂಡರೆ ಉಳಿದುದು ಎಲ್ಲವೂ ಸುಲಭವಿದೆ. 'ಸಾಧ್ವಿ' ಯು ಮುಂದುವರಿಯುತ್ತಾ, ಶ್ರೀ ದಾಸಪ್ಪನವರಿಗೆ ಕಾಂಗ್ರೆಸ್ ಕೆಲಸಗಾರರ ಬೆಂಬಲ ವೆಷ್ಟಿದೆಯೆಂಬುದನ್ನು ನೋಡುವಂತಾಯಿತೆಂದೂ ಹೇಳಿರುವುದು ಬಹು ವಿಚಿತ್ರ ವಾದವೆನ್ನಬೇಕು. ಸ್ವಾರ್ಥತ್ಯಾಗಾದಿಗಳ ಪ್ರಶ್ನೆಯನ್ನು ನಾವು ಇಲ್ಲಿ ವಿಮರ್ಶಿಸುವುದಿಲ್ಲ. ಆದರೆ, ಮೈಸೂರು ಕಾಂಗ್ರೆಸಿನ ಮಾಜೀ ಅಧ್ಯಕ್ಷರೊಬ್ಬರು, ಅದರಲ್ಲಿಯೂ ಕಾಂಗ್ರೆಸಿನ ಸರ್ವಸ್ವವೇ ಆಗಿದ್ದವರು ಚುನಾವಣೆಯಲ್ಲಿ ವರ್ಕಿಂಗ್ ಕಮಿಟಿ ಸದಸ್ಯ ಸ್ಥಾನವನ್ನು ಗಳಿಸಲಾರದವರಾದರೆಂದರೆ, ಮತಸಂಗ್ರಹ ಮಾಡುತ್ತಿದ್ದ ಕಾಂಗ್ರೆಸ್ ಮುಂದಾಳುಗಳ ಮನೋವೃತ್ತಿಯನ್ನು ಬೆಳಿಚ್ಚು ತೋರಿಸಿತ್ತಿದೆಯೆಂದು ಹೇಳುದೆ ವಿಧಿಯಿಲ್ಲ. (ಮುಂದುವರಿಯುವುದು)

'ಮಲ್ಲ'

ಭಾರತದ ಅನ್ನ ಪರಿಸ್ಥಿತಿ ಉತಟ ! ನಿಜಕ್ಕೂ

೧೦೦೦೦೦ ಮಂದಿ ಕ್ಷಾಮಕ್ಕೆ ಬಲಿಯೇ ?

ನ್ಯಾಯಾಂಗ ಸಚಿವರಾದ ಶ್ರೀ ಓ. ಎಸ್. ಆರ್. ಷರೀಫರು ನಿನ್ನೆಯ ದಿವಸ ಮೈಸೂರಿಗೆ ಆಗಮಿಸಿದರು. ಅವರು ಮೈಸೂರಿನಲ್ಲಿ 3 ದಿವಸವಿರುವರು.

ಅರ್ಧ ಪಡಿ ಭತ್ಯ ಕೊಡುತ್ತಿರುವುದನ್ನು ಪ್ರತಿಭಟಿಸಲು ಅಲಹಾಬಾದಿನ ಪೊಲಿಸ್ ಲೈನ್ಸಿನ ಕೆಲವರು ಅನ್ನವಿಲ್ಲದೆ ಕೆಲಸಕ್ಕೆ ಹೋದರು.

ಚುನಾವಣಾ ವಾತಾವರಣವು ಸರಿಯಿಲ್ಲದಿದ್ದ ಕಾಗ್ರೀಸಿನಲ್ಲಿ ಮಹಾ ಚಿನ್ನಾ ಪಣಿನಡೆಯುವುದೆಂದು ಹೇಳಲಾಗಿದೆ.

ಅಧಿಕ ಲಾಭ ತೆರಿಗೆಯನ್ನು ರದ್ದು ಮಾಡಬೇಕೆಂದು ಮೈಸೂರು ವಾಣಿಜ್ಯ ಸಂಘ ಸರ್ಕಾರಕ್ಕೆ ಮನವಿ ಮಾಡಿಕೊಂಡಿದೆ.

ಪುನರ್ನಿರ್ಮಾಣ ಕೆಲಸಕ್ಕಾಗಿ ಇಟ್ಟಿರುವ ರೂ. 12 ಲಕ್ಷದಲ್ಲಿ ರೂ. 2 ಲಕ್ಷವನ್ನು ಮಲೇರಿಯಾ ನಿವಾರಣೆಗೂ ರೂ. 1 ಲಕ್ಷವನ್ನು ನೀರಾವರಿಗೂ ಉಪಯೋಗಿಸಬೇಕೆಂದು ಕೊಡಗು ಶಾಸನ ಸಭೆಯಲ್ಲಿ ಮುಂಜೂರಾಯಿತು.

ಕೋಮಿಂಟಾಂಗ್ ಸಭೆಯಲ್ಲಿ ಸಭೆಯಲ್ಲಿ ಚಿಯಾಂಗ್ ಕೈಷೇಕರು ಭಾಷಣ ಮಾಡುತ್ತಾ ಚೀನಾದಲ್ಲಿ ಐಕಮತ್ಯ ಮಹತ್ವದಿಂದ ರಷ್ಯದೊಡನೆ ಮೈತ್ರಿ ಉಳಿಯಬೇಕೆಂದಿರುವರು

ಲೀಗನ್ನು ಮುಟ್ಟಿ ಹಾಕಲು ಪ್ರಯತ್ನಿಸುತ್ತಿರುವುದಾಗಿ ಮಿ || ಜಿನ್ನಾ ಸಾಹೇಬರು ಕಾಂಗ್ರೇಸಿನ ಮೇಲೆ ಆರೋಪಣೆ ಹೊರಿಸಿರುವರು.

ವಾಷಿಂಗ್ಟನ್ ಮಾ 18— ದುರಾಗೌರ್ನರರ ಸಲಹೆಗಾರರಾದ ಸರ್ ರಾವ ಸ್ವಾಮಿಯವರು ಮಿತ್ರರು ಜಪಕ್ಕೆ ಭಾರತಕ್ಕೆ ಸಹಾಯ ಮಾಡಬೇಕೆಂದು ವಿವರಿಸಿ ಭಾರತದಲ್ಲಿನ ಅನ್ನದ ವಸ್ಥಿತಿ ಬಗ್ಗೆ ಕೊಟ್ಟಿರು ಹೇಳಿಕೆ ವೇಲೆ ವಾಷಿಂಗ್ಟನ್ ಪೋಸ್ಟ್ ಪತ್ರಿಕೆ 'ಭಾರತದಲ್ಲಿ 10 ಮಿಲಿಯ ಮಂದಿ ಸಾಯುವರು, ಕ್ಷಾಮ ಭೀಕರವಾಗಿದೆಯೆಂದೂ ಮುಂತಾಗಿ ಬರೆದಿರುವದು

ಲಂಡನ್ ಮಾ 18— ಪಾರ್ಲಿಮೆಂಟು ಮೆಂಬರುಗಳಿಗೆ ಈಗ ಇರುವ 600 ಪೌಂಡು ಸಂಬಳವನ್ನು 1000 ಪೌಂಡುಗಳಿಗೆ ಹೆಚ್ಚಿಸಲು ಶ್ವೇತಪತ್ರದಲ್ಲಿ ಶಿಫಾರಸು ಮಾಡಲಾಗಿದೆ.

ಬಾಗ್ದಾದ್ ಮಾ 17— ಟೈಗ್ರಿಸ್ ನದಿಯು ಪ್ರವಾಹಪಹೆಚ್ಚಿ, ಬಾಗ್ದಾದಿನಲ್ಲಿ ಎಂದೂ ಇಲ್ಲದಷ್ಟು ನೆರೆಹಾವಳಿಯಾಗಿದೆ, ಈ ರಾತ್ರಿ ಬಾಗ್ದಾದಿನ ಸುತ್ತ 300 ಚದುರು ಮೈಲಿ ಮತ್ತು 3 ಅಡಿ ಆಳ ನೀರು ತುಂಬಿತ್ತು.

ನವದೆಹಲಿ ಮಾ 15— ಹಾಂಕಾಂಗಿನಲ್ಲಿ 5 ಮಂದಿ ಭಾರತೀಯ ವರ್ತಕರು ಜಪಾನಿಯರಿಗೆ ಸಹಾಯವಾಗುವಂತೆ ವರ್ತಿಸಿದರೆಂದು ದಸ್ತಗಿರಿ ಮಾಡಲ್ಪಟ್ಟಿರುವರೆಂದು ಕೇಂದ್ರ ಅಸೆಂಬ್ಲಿಯಲ್ಲಿ ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರ ದೊರೆಯಿತು.

ಮೇಲುಕೋಟೆಯ ವೈರಮುಡಿ ಉತ್ಸವ ಕಾಲದಲ್ಲಿ ನಾರಾಯಣಾ ಚಾರಿ ಎಂಬ ಹದಿನಾರು ವರ್ಷದ ಹುಡುಗ ನೊಬ್ಬನು ಕಲ್ಯಾಣಿಯಲ್ಲಿ ಈಜುತ್ತಿದ್ದಾಗ ಮುಳುಗಿ ಸತ್ತನು.

ದನಗಳ ಪ್ರದರ್ಶನ

ನಂಜನಗೂಡು, ಮಾ 19 — ನಂಜನಗೂಡು ಸಬ್ ಡಿವಿಜ್ ಆಫೀಸರಾದ ಶ್ರೀ ಜಿ ನರಸಿಂಹಯ್ಯ, ಎಂ. ಎಸ್ಸಿ. ರವರ ಅಧ್ಯಕ್ಷತೆಯಲ್ಲಿ, ನಿನ್ನೆ ಸಂಜೆ 5 ಘಂಟೆಯಲ್ಲಿ ದನಗಳ ಪ್ರದರ್ಶನ ನಡೆಯಿತು. ಪೌರಸಭೆಯ ಸದಸ್ಯರುಗಳೆಲ್ಲರೂ ಆಗಮಿಸಿದ್ದರು. ದನಗಳ ಪರಿಕ್ಷೆ ನಡೆಯಿತು. ದನಗಳ ಪ್ರದರ್ಶನ ಸಮಿತಿ ಕಾರ್ಯದರ್ಶಿಗಳಾದ ಶ್ರೀ ವೈ. ಕೆ. ಎಸ್. ಲಕ್ಷ್ಮಣಶೆಟ್ಟರು ವರದಿಯನ್ನೊಪ್ಪಿಸಿದರು. ಬಹುಮಾನ ಹಂಚಿಕೆಯಾದನಂತರ ಸಮಿತಿ ಅಧ್ಯಕ್ಷರಾದ ಶ್ರೀ ಎ. ವಿ. ಕೃಷ್ಣರವರು ಭಾಷಣ ಮಾಡಿದರು. ರಾಷ್ಟ್ರಗೀತೆಯಾದನಂತರ ಕಾರ್ಯಕ್ರಮ ಮುಗಿಯಿತು.

ಪ್ರೆಸ್ ನೌಕರರ ಸಂಘ

ಮೈಸೂರು, ಮಾ 19 — ಶ್ರೀರಾವ್‌ಪೇಟೆ ಈವಿನಿಂಗ್ ಬಜಾರ್‌ನಲ್ಲಿರುವ 'ಧನಲಕ್ಷ್ಮಿ ಪ್ರಿಂಟಿಂಗ್ ಪ್ರೆಸ್' ನಲ್ಲಿರುವ ಶ್ರೀ ನರಸಿಂಹಯ್ಯನವರು ಪ್ರೆಸ್ ಕೆಲಸಗಾರರ ಕುಂದುಕೊರತೆಗಳನ್ನು ಗಮನಿಸಿ ಅದನ್ನು ಬಗೆ ಹರಿಸುವ ಸಲುವಾಗಿ 'ಪ್ರೆಸ್ ಕೆಲಸಗಾರರ ಸಂಘ' ಎಂಬುದನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ.

ಪ್ರಚಾರೋಪನ್ಯಾಸ

ಮೈಸೂರು, ಮಾ 19 — ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಗಳ ಆಶ್ರಯದಲ್ಲಿ ಮಧುಗಿರಿಯಲ್ಲಿ ತಾ || 23 ರ ಸಂಜೆ ಬೆಂಗಳೂರು ಮಹಾರಾಣಿ ಕಾಲೇಜಿನ ಲೆಕ್ಚರರಾದ ಶ್ರೀ ಎಚ್. ಎಂ. ಪಾರ್ವತಮ್ಮ ಎಂ. ಎ. ರವರು 'ಮೈಸೂರಿಗೊಂದು ವ್ಯವಸಾಯದ ಯೋಜನೆ' ಎಂಬ ವಿಷಯವನ್ನು ಕುರಿತು ಉಪನ್ಯಾಸವನ್ನು ಮಾಡುವರು.

Epilepsy & Hysteria

CURED FOR EVER

By smelling this wonderlu herb when attacked by Fits, a black worm 1-1/4" long will come with the sneeze of the patient. The patient will get a miracle cure of the diseases for ever. Apply in English to—

Shri 108 Mahatma Sidhbaba
P. O. Nagod (Jubbulpore)

ಸೈನ್ಯಕ್ಕೆ ಬೆಂಗಳೂರು ಚಿತ್ರಗಾರರ ಚಿತ್ರ

ಬೆಂಗಳೂರು ಮಾ 15— ಮೈಸೂರು ಮತ್ತು ತಿರುವಾಂಕೂರು ಅರಮನೆಗಳಿಗಾಗಿ ಹಲವು ವರ್ಣ ಚಿತ್ರಗಳನ್ನು ಚಿತ್ರಿಸಿರುವ ಶ್ರೀ ಎ. ಡಿ. ಗೋವಿಂದರಾಜ್‌ರವರು ಸೈನ್ಯಶಾಖೆಗಳಿಗಾಗಿ ಅನೇಕ ವರ್ಣಚಿತ್ರಗಳನ್ನು ಬರೆದುಕೊಟ್ಟಿದ್ದಾರೆ. ನಿತ್ಯವೂ ಭಾರತೀಯ ಸೈನಿಕರು ವಿಶ್ರಾಂತಿಗಾಗಿ ಸೇರುವ ಬೆಂಗಳೂರಿನ ಜಯಶಾಲೆಯಲ್ಲಿ ಈ ಚಿತ್ರಕಾರರ ವರ್ಣಚಿತ್ರಗಳು ಮನೋಹರವಾಗಿ ಮೆರೆಯುತ್ತಿವೆ. ಅವುಗಳಲ್ಲಿ ಇವರ ವರ್ಣವಿನ್ಯಾಸ ಕೌಶಲ್ಯಗಳನ್ನು ಕಾಣಬಹುದು. ಜಪಾನಿನಲ್ಲಿ ಭಾರತೀಯ ಸೈನ್ಯಾಧಿಕಾರಿಗಳ ಭೋಜನಶಾಲೆಗಾಗಿ ಇವರು ಎರಡು ವರ್ಣಚಿತ್ರಗಳನ್ನು ಸೈನ್ಯ ಶಾಖೆಯವರು ಕೊಂಡಿದ್ದಾರೆ. ಇತೀಚಿಗೆ ವಿದೇಶಿಸಿ ಸ್ವಾರ್ತೋವಿಸಲ್ಲಿರುವ ಸೈನ್ಯಾಧಿಕಾರಿಗಳ ಭೋಜನಶಾಲೆಗಾಗಿ ಇವರು ಆರು ಚಿತ್ರಗಳನ್ನು ಬರೆದುಕೊಟ್ಟಿದ್ದಾರೆ.

.....

ಬಟಾವಿಯಾ ಮಾ 16— ಇಂಡೋನೇಷಿಯಾ ಸ್ವಾತಂತ್ರದ ಬಗ್ಗೆ ಷಾರಿರ್–ವಾರ್ಮುಕ್‌ರವರ ಮಾತುಕತೆ ನಡೆಯುತ್ತಿದೆ.

ಸುಭಾಷ್

ರವರ ಜೀವನ ಚರಿತ್ರೆ

ಅಂದು ಬಾಬು —

— ಇಂದು ನೇತಾಜಿ

ಬರೆದವರು "ಕಾಂತ್"

ಸಾಹಿತ್ಯ ಮಂದಿರ

ಜಗನ್ಮೋಹನ ಬಂಗ್ಲೆ ರಸ್ತೆ

ಮೈಸೂರು

At Opera —
2 ನೇ ವಾರ

ಮೇಹತಾಬ್ — ಸುರೇಂದ್ರ

ಪಾತ್ರವಹಿಸಿರುವ

.... ವಿಶ್ವಾಸ್....

At Ranjit

From 10–3–46

Shirin Farad

— with —

RAGINI & JAYANT

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು
ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು
ಸಾಬೂನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಸುಖ ಆರೋಗ್ಯ ಆನಂದದಾಯಕ
ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ. ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ. ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಔಷಧಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಹರ್ಷ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಅಲ್ಪ ವ್ಯಯದ ಕಾಯಕಲ್ಪ

ಶಕ್ತಿಸುಧಾ

ರಕ್ತವೃದ್ಧಿಗೆ — ಧಾತುಪುಷ್ಟಿಗೆ
ಸಂಜೀವನ

ಬೆಲೆ ಡಬ್ಬಿಗೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು